## ಈ ಲೇಖನದ ವಿಷಯಾನುಕ್ರಮಣಿಕೆ


ದೇವರ ಮನೆಯ ಸ್ವಚ್ಛತೆ 2

ಮನೆಯಲ್ಲಿ ದೇವರ ಮನೆಯ ಆವಶ್ಯಕತೆ 3

ದೇವರ ಮನೆ ಹೇಗಿರಬೇಕು 7

ಸಂಮಾರ್ಜನದಿಂದ ದೊರೆಯುವ ಮಹಾಫಲಗಳು 9

ಸ್ವಚ್ಛತೆಯನ್ನು ಯಾವಾಗ ಮಾಡಬೇಕು 9

ಪಾಪರಾಶಿಯ ಪರಿಹಾರ 12

ಒಂದು ಕಲ್ಪದವರೆಗೆ ಮಹರ್ಲೋಕದ ಪ್ರಾಪ್ತಿ 13

ಗೋದಾನದ ಫಲ 15

ಸೆಗಣಿಯಿಂದ ಸಾರಿಸಿದರೆ ಚಾಂದ್ರಾಯಣದ ಫಲ 16

ಸುಣ್ಣ ಬಣ್ಣ ಮಾಡಿದರೆ ಹರಿಲೋಕ 17

ಸಮಸ್ತಸಂಪತ್ತಿನ ಪ್ರಾಪ್ತಿ 18

ಸದ್ಗುಣಸಂಪನ್ನ ರಾಜಜನ್ಮ ಪ್ರಾಪ್ತಿ 19

ಇರುವೆ ಮುಂತಾದವಕ್ಕೆ ತೊಂದರೆಯಾಗಬಾರದು 22

ಸ್ವಚ್ಛತೆಯ ಪದಾರ್ಥಗಳು 23

ಹುಲ್ಲಿನ ಪೊರಕೆ 24

ಶುದ್ಧವಾದ ನೀರು 26

ಪ್ಲಾಸ್ಟಿಕ್ಕು, ಕೆಮಿಕಲ್ಲುಗಳ ಉಪಯೋಗ ಬೇಡ 27

ರಂಗೋಲಿಯ ಫಲ 28

ದೀಪವನ್ನು ಬೆಳಗಿಸಬೇಕು 30

ಸ್ವಚ್ಛ ಮಾಡಬೇಕಾದರೆ ಅನುಸಂಧಾನ 32

## ದೇವರ ಮನೆಯ ಸ್ವಚ್ಛತೆ

ದೇವರ ಪೂಜೆಯಲ್ಲಿನ ಮೊಟ್ಟ ಮೊದಲ ಹಂತ ದೇವರ ಮನೆಯ ಸ್ವಚ್ಛತೆ. ಅದರ ಕುರಿತು ಈ ಲೇಖನದಲ್ಲಿ ತಿಳಿಯೋಣ.

ದೇವರ ಮನೆಯನ್ನು ಮಾತ್ರ ಗುಡಿಸಲು ಒಂದು ಹುಲ್ಲಿನ ಪೊರಕೆಯಿರಬೇಕು. ಅದರಿಂದಲೇ ಗುಡಿಸಬೇಕು. ಶುದ್ಧವಾದ ನೀರಿನಿಂದ ವರೆಸಬೇಕು. ಗೋಮಯದಿಂದ ಸಾರಿಸಬೇಕು. ಆಗಾಗ ಸುಣ್ಣ ಬಣ್ಣ ಮಾಡಿ ಅಲಂಕರಿಸಬೇಕು. ಪ್ರತೀನಿತ್ಯವೂ ರಂಗೋಲಿ ಹಾಕಬೇಕು. ಹಬ್ಬ, ವ್ರತಗಳಲ್ಲಿ ತಳಿರು ತೋರಣಗಳಿಂದ ಅಲಂಕರಿಸಬೇಕು. ಒಟ್ಟಿನಲ್ಲಿ ನಮ್ಮ ಸ್ವಾಮಿ ಇರುವ ಮನೆಯನ್ನು ಶುಚಿಯಾಗಿ, ಪವಿತ್ರವಾಗಿ, ಸುಂದರವಾಗಿ, ದೇವರು ಸಂಪತ್ತು ನೀಡಿದ್ದರೆ ವೈಭವದಿಂದ ಇಟ್ಟುಕೊಳ್ಳಬೇಕು.

# ಮನೆಯಲ್ಲಿ ದೇವರ ಮನೆಯ ಆವಶ್ಯಕತೆ

ಮನೆ ಕಟ್ಟುವಾಗ ದೇವರ ಪೂಜೆಗಾಗಿಯೇ ಒಂದು ಮನೆಯನ್ನು ಅವಶ್ಯವಾಗಿ ಕಟ್ಟಬೇಕು.

ಶ್ರೀಹರಿ ಅನುಗ್ರಹ ಮಾಡಿ ನಮಗೆ ಬದುಕಲಿಕ್ಕೊಂದು ಮನೆಯನ್ನು ನೀಡಿದಾಗ ಅವನ ಪೂಜೆಗಾಗಿ ಒಂದು ಕೊಠಡಿಯನ್ನೂ ನಾವು ಕಟ್ಟಬೇಕು.

ಮತ್ತು ದೇವರಿಗೆ ಕೃತಜ್ಞತೆ ಹೇಳಲಿಕ್ಕಾಗಷ್ಟೇ ದೇವರ ಮನೆ ಕಟ್ಟುವದಲ್ಲ. ನಮ್ಮ ಉದ್ಧಾರದ ತಾಣವದು. ಶ್ರೀಹರಿ ಕರುಣಿಸಿದ ಸುಖವನ್ನು ಅವನಿಗರ್ಪಿಸಲು ಇರುವ ಸ್ಥಳ. ನಮ್ಮ ಕರ್ಮಗಳಿಂದ ದುಃಖ ದುಮ್ಮಾನಗಳು ಆವರಿಸಿ ಬಂದಾಗ ಅದರಿಂದ ಪಾರಾಗಲು ನಮಗಿರುವ ಸ್ಥಳ ದೇವರ ಮನೆ.

ಸುಖವಾಗಲಿ ದುಃಖವಾಗಲಿ ನಮಗೆ ದೇವರ ಮನೆ ಬೇಕು. ದುಃಖವಾದಾದ ದೇವರ ಮುಂದೆ ಕುಳಿತು ನಮ್ಮ ಮನಸ್ಸಿನ ಭಾವವನ್ನು ತೋಡಿಕೊಂಡಾಗ ಮನಸ್ಸು ಹೃದಯಗಳು ಹಗುರವಾಗುವಷ್ಟು

ಯಾವ ಗೆಳೆಯ, ಗೆಳತಿಯರ ಮುಂದೆ ಹೇಳಿಕೊಂಡರೂ ಆಗುವದಿಲ್ಲ. ಯಾವ ಆತ್ಮೀಯರ ಮುಂದೆ ಹೇಳಿಕೊಂಡರೂ ಆಗುವದಿಲ್ಲ.

ಬದುಕೇ ಬೇಡ, ಸಾಕು ಎನ್ನುವಂತಹ ಪರಿಸ್ಥಿತಿಯಲ್ಲಿಯೂ ದೇವರ ಮುಂದೆ ಕುಳಿತು ದಾಸವರ್ಯರ ಹಾಡೊಂದನ್ನು ಹಾಡಿ ನೋವನ್ನು ನಿವೇದಿಸಿಕೊಂಡರೆ ದೇವರು ಧೈರ್ಯ ನೀಡುತ್ತಾನೆ. ಆ ನಿವೇದನೆಯ ತಾಣ ದೇವರ ಮನೆಯೇ ಮನೆಯಲ್ಲಿಲ್ಲದಿದ್ದರೆ ಹೇಗೆ.

ರಾತ್ರಿ ಯಾವುದೋ ಕೆಟ್ಟ ಕನಸು ಬೀಳುತ್ತದೆ. ಬೆಚ್ಚಿಬಿದ್ದು ಎದ್ದೇಳುತ್ತೇವೆ. ದೇವರ ಮನೆಯ ಬಳಿ ಬಂದು ನಮಸ್ಕರಿಸಿ ಹೋದರೆ ಮನಸ್ಸಿನಲ್ಲಿ ಅಭಯ ಮೂಡುತ್ತದೆ.

ಯಾವುದೋ ಮಹತ್ತರ ಕೆಲಸವಾಗಿರುತ್ತದೆ. ಸಾಲ ತೀರಿರುತ್ತದೆ. ಹಣ ದೊರೆತಿರುತ್ತದೆ. ಅಪಾಯದಿಂದ ಪಾರಾಗಿರುತ್ತೇವೆ. ಸಾವಿನ ಜೊತೆ ಹೋರಾಡಿ ಆಸ್ಪತ್ರೆಯಿಂದ ಮನೆಗೆ ಬಂದಿರುತ್ತೇವೆ. ಬಂದವರೇ ದೇವರ ಮನೆಯ ಬಳಿ ಬಂದು

ಕೈಮುಗಿದು, ನೆಲಕ್ಕೆರಗಿ “ಕಾಪಾಡಿದೇ ನನ್ನೊಡೆಯಾ” ಎಂದು ನಮಸ್ಕಾರ ಮಾಡಿದಾಗ ದೊರೆಯುವ ಭದ್ರತೆಯ ಭಾವ ಉಂಟಲ್ಲ, ಅದು ಅದ್ಭುತ.

ಗಂಡ ಆಫೀಸಿಗೆ ಹೊರಟು, ಮಕ್ಕಳು ಶಾಲೆಗೆ ಹೊರಟು ಮನೆಯಲ್ಲಿ ಒಬ್ಬರೇ ಆದಾಗ ದೇವರ ಮನೆಗೆ ಬಂದು, ಹಾಡು ಹಾಡುತ್ತ, ದೇವರ ಮನೆಯ ಕೆಲಸ ಮಾಡುತ್ತ ಆನಂದವನ್ನು ಅನುಭವಿಸುವ ಹೆಣ್ಣುಮಕ್ಕಳನ್ನು ನೋಡಿ. ಎಂತಹ ಕಷ್ಟವನ್ನೂ ಗೆಲ್ಲುವ ತಾಕತ್ತು ಅವರಲ್ಲಿರುತ್ತದೆ.

ಗಂಡನಿಗೋ, ಮಕ್ಕಳಿಗೊ ತೊಂದರೆಯಾದ ತಕ್ಷಣ ದೇವರ ಮುಂದೆ ತುಪ್ಪದ ದೀಪ ಹಚ್ಚಿ ಸ್ವಾಮಿ ಕಾಪಾಡು ಎಂದು ಬೇಡುತ್ತಾರೆ. ಶ್ರೀಹರಿ ನಿಶ್ಚಿತವಾಗಿ ಕಾಪಾಡುತ್ತಾನೆ.

ಮನುಷ್ಯರಾಗಿ ಹುಟ್ಟಿದ್ದೇವೆ. ನೌಕರಿ, ಮದುವೆ, ಮಕ್ಕಳು ಎಲ್ಲರ ಜೀವನದಲ್ಲಿಯೂ ಇದ್ದದ್ದೆ. ಈ ಸಂಸಾರದ ಮಧ್ಯದಿಂದಲೇ ಮೋಕ್ಷಕ್ಕಾಗಿ ಎದ್ದು ಹೋಗಬೇಕಾಗಿದೆ. ಆ ಮೋಕ್ಷದ ಮಾರ್ಗದ

ಬಾಗಿಲು ಇರುವದು ದೇವರ ಮನೆಯಲ್ಲಿ. ದೇವರ ಪೂಜೆಯಲ್ಲಿ.

ನಾವು ಮಾಡುವ ನಮಸ್ಕಾರ, ಸ್ತೋತ್ರ, ಪೂಜೆಗಳ ತಾಣವಾದ, ನಮ್ಮ ಅಂತರ್ಯಾಮಿಯನ್ನು ನಾವು ಕರೆದು ಪೂಜಿಸುವ ತಾಣವಾದ ಒಂದು ಕೊಠಡಿ ಮನೆಯಲ್ಲಿದ್ದರೇ ಮನೆ ಭೂಷಣ.

ಹೀಗೆ, ನಮ್ಮ ನೋವು, ದುಃಖಗಳನ್ನು ಉಪಶಮನ ಮಾಡುವ, ಸುಖ, ಸಂತೋಷಗಳನ್ನು ನೂರ್ಮಡಿ ಮಾಡುವ, ರಕ್ಷಣೆಯ ಭಾವವನ್ನೀಯುವ, ನಮ್ಮ ಅಂತರ್ಯಾಮಿಯನ್ನು ಕರೆದು ಪೂಜಿಸಬಲ್ಲ ನೆಲೆತಾಣವಾದ, ನಮ್ಮ ಸ್ವಾಮಿಯನ್ನು ಮನತುಂಬಿ ಪೂಜಿಸಬಹುದಾದ ದೇವರಮನೆಯಿಲ್ಲದ ಮನೆ ಮನೆಯೇ ಅಲ್ಲ.

ಹೀಗಾಗಿ ಮನೆಯನ್ನು ಕಟ್ಟುವಾಗ ಅವಶ್ಯವಾಗಿ ದೇವರ ಮನೆಯನ್ನು ಕಟ್ಟಿಸಲೇ ಬೇಕು.

## ದೇವರ ಮನೆ ಹೇಗಿರಬೇಕು

ಮುಖ್ಯವಾಗಿ ಪ್ರದಕ್ಷಿಣೆ ಬಂದು ನಮಸ್ಕಾರ ಹಾಕುವಂತಿರಬೇಕು.

ದೇವರಿಗೆ ಮಾಡುವ ನಮಸ್ಕಾರ ಸರ್ವಶ್ರೇಷ್ಠವಾದ ಸಾಧನೆ. ಸಮಸ್ತ ಆಪತ್ತುಗಳ ನಿವಾರಕ. ಸರ್ವಸಂಪತ್ಪ್ರದ. ಎಲ್ಲದರ್ಕಿಂತ ಮುಖ್ಯವಾಗಿ ನಮಸ್ಕಾರವೇ ಷೋಡಶ ಉಪಚಾರಗಳಲ್ಲಿ ಕಡೆಯ ಉಪಚಾರ. ಆ ನಮಸ್ಕಾರವನ್ನು ಭಕ್ತಿಯಿಂದ ಹಾಕುವಂತಿರಬೇಕು.

ಮಧ್ಯದಲ್ಲಿ ದೇವರ ವೇದಿಕೆ. ಆ ವೇದಿಕೆಯ ಮೇಲೆ ಮಂಟಪ. ವೇದಿಕೆಯ ಮೇಲೆ ಕುಳಿತು ಮಂಟಪದಲ್ಲಿನ ಶ್ರೀಹರಿಗೆ ಪೂಜೆ ಮಾಡುವಂತಿರಬೇಕು. ವೇದಿಕೆಗೆ ಪ್ರದಕ್ಷಿಣೆ ಬಂದು ನಮಸ್ಕಾರ ಹಾಕುವಂತಿರಬೇಕು.

ಕುಳಿತು ಪೂಜೆ ಮಾಡುವಷ್ಟು ವಿಶಾಲ ವೇದಿಕೆ ಕಟ್ಟಲು ಸಾಧ್ಯವಿಲ್ಲದಿದ್ದಲ್ಲಿ, ಮಂಟಪವನ್ನು ಮಧ್ಯದಲ್ಲಿಡುವಷ್ಟು ಕಟ್ಟಬೇಕು. ಸುತ್ತಲೂ ಪ್ರದಕ್ಷಿಣೆ ಬಂದು ನಮಸ್ಕರಿಸುವಂತಿರಬೇಕು.

ಈ ದೇವರ ಮನೆಯನ್ನು ಪ್ರತೀನಿತ್ಯವೂ ಸ್ವಚ್ಛ ಮಾಡಬೇಕು. ದೇವರ ಮನೆಯಲ್ಲಿ ಧೂಳು ಸೇರದಂತೆ, ಜೇಡ ಕಟ್ಟದಂತೆ, ಜಿರಳೆ ಮುಂತಾದ ಹುಳುಗಳು ಸೇರಿಕೊಳ್ಳದಂತೆ ನೋಡಿಕೊಳ್ಳಬೇಕಾದ್ದು ಅವಶ್ಯ ಕರ್ತವ್ಯ.

ಕೊಳೆ ತುಂಬಿದ ದೇವರ ಮನೆಯಲ್ಲಿ ಮಡಿಯೇ ಹುಟ್ಟುವದಿಲ್ಲ.

ಕೆಲವು ಕಡೆಯಲ್ಲಂತೂ ಕೊಳೆತು ನಾರುವ ವಾಸನೆ ಇರುತ್ತದೆ. ಸರ್ವಥಾ ಹಾಗಿಟ್ಟುಕೊಳ್ಳಬಾರದು.

ದೇವರ ಮನೆ, ದೇವರ ಪೆಟ್ಟಿಗೆ, ದೇವರ ವಸ್ತುಗಳಲ್ಲಿ ಎಷ್ಟು ಕೊಳೆಯಿರುತ್ತದೆಯೋ ಅಷ್ಟು ದಾರಿದ್ರ್ಯ, ಅಷ್ಟು ದುಃಖ ಮನೆಯಲ್ಲಿರುತ್ತದೆ. ಹೀಗಾಗಿ ಸರ್ವಥಾ ಕೊಳೆಯಿಲ್ಲದಂತೆ, ವಾಸನೆಯಿಲ್ಲದಂತೆ ದೇವರ ಮನೆಯನ್ನು ಕಾಪಾಡಬೇಕಾದ್ದು ನಮ್ಮ ಕರ್ತವ್ಯ.

## ಸಂಮಾರ್ಜನದಿಂದ ದೊರೆಯುವ ಮಹಾಫಲಗಳು

ಶ್ರೀಹರಿಯ, ದೇವತೆಗಳ ಕಾರುಣ್ಯ ಎಷ್ಟು ಹಿರಿದಾದದ್ದು ಎಂದರೆ, ನಾವು ಅವಶ್ಯವಾಗಿ ಮಾಡಲೇಬಾಕದ ಈ ಕರ್ತವ್ಯವನ್ನು ಪಾಲಿಸಿದರೆ ಮಹಾಫಲವನ್ನು ಕರುಣಿಸುತ್ತಾರೆ.

ದೇವರ ಮನೆಯ, ದೇವಾಲಯಗಳ ಸ್ವಚ್ಛತೆಯನ್ನು ಮಾಡುವದರಿಂದ ಶ್ರೇಷ್ಠ ಫಲಗಳು ಉಂಟಾಗುತ್ತವೆ ಎಂದು ಪುರಾಣಗಳು ತಿಳಿಸಿ ಹೇಳುತ್ತವೆ.

ಸಂಮಾರ್ಜನ ಎಂದರೆ ಸ್ವಚ್ಛ ಮಾಡುವದು. ಗುಡಿಸುವದು, ತೊಳೆಯುವದು, ವರೆಸುವದು ಎಲ್ಲವೂ ಈ ಶಬ್ದದ ಅರ್ಥದ ವ್ಯಾಪ್ತಿಯಲ್ಲಿ ಬರುತ್ತದೆ.

## ಸ್ವಚ್ಛತೆಯನ್ನು ಯಾವಾಗ ಮಾಡಬೇಕು

ಸೂರ್ಯೋದಯಕ್ಕಿಂತ ಮುಂಚೆಯೇ ಹಿಂದಿನ ದಿವಸದ ನಿರ್ಮಾಲ್ಯ ತುಳಸೀ ಪುಷ್ಪಗಳ ವಿಸರ್ಜನೆಯಾಗಬೇಕು ಎನ್ನುವದು ಶಾಸ್ತ್ರದ ವಿಧಿ.

ನಿರ್ಮಾಲ್ಯವಿಸರ್ಜನೆಗಿಂತ ಮುಂಚೆ ದೇವರ ಮನೆ ಸ್ವಚ್ಛವಾಗಿರಲಬೇಕು. ಹೀಗಾಗಿ ಅರುಣೋದಯ ಕಾಲದಲ್ಲಿಯೇ ದೇವರ ಮನೆಯನ್ನು ಸ್ವಚ್ಛ ಮಾಡಬೇಕು. ಸಾಧ್ಯವಿಲ್ಲದ ಪಕ್ಷದಲ್ಲಿ ಹಿಂದಿನ ದಿವಸ ರಾತ್ರಿಯೇ ಮಾಡಿಬಿಡಬೇಕು. ಅಂತೂ ನಿರ್ಮಾಲ್ಯವಿಸರ್ಜನೆಗಾಗಿ ದೇವರ ಮನೆಯನ್ನು ಪ್ರವೇಶ ಮಾಡಬೇಕಾದರೆ ದೇವರ ಮನೆ ಸ್ವಚ್ಛವಾಗಿರಬೇಕು.

ಶಾಸ್ತ್ರ ತಿಳಿಸುವಂತೆ ಸ್ನಾನಕ್ಕಿಂತಲೂ ಮುಂಚೆ ದೇವರ ಮನೆಯ ಸ್ವಚ್ಛತೆಯನ್ನು ಮಾಡಬಹುದು. ಆದರೆ  ದೇವರ ವೇದಿಕೆಯನ್ನು ಸ್ವಚ್ಛ ಮಾಡಬೇಕಾದರೆ, ಅಲ್ಲಿ ರಂಗೋಲಿಯನ್ನು ಹಾಕಬೇಕಾದರೆ ಸ್ನಾನವಾಗಿರಲೇಬೇಕು.  ಇನ್ನು ದೇವರ ಮಂಟಪದ ಸ್ವಚ್ಚತೆಯನ್ನು ಮಾಡ-ಬೇಕಾದರೆ, ಕೇವಲ ಸ್ನಾನವಾಗಿದ್ದರೆ ಸಾಲದು, ದೇವರ ಪೂಜೆಯ ಮಡಿ[1]ಯಲ್ಲಿಯೇ ಇರಬೇಕು. ಮರೆಯದಂತೆ ಈ ನಿಯಮಗಳನ್ನು ಪಾಲಿಸಬೇಕು.

---

[1] ಮಡಿಮೈಲಿಗೆಗಳ ಕುರಿತು ಸ್ಪಷ್ಟ ಚಿತ್ರಣ ನೀಡುವ ಲೇಖನಗಳನ್ನು ಪ್ರಕಟಿಸಿದ್ದೇನೆ. ಓದಿ. VNA97,98,99,100

ಸ್ನಾನ ಮಾಡಿಯೇ ದೇವರ ಮನೆಯನ್ನು ಸ್ವಚ್ಛ ಮಾಡುವದು ಉತ್ತಮ ಪಕ್ಷ. ಮನೆಯಲ್ಲಿ ಬೇರೆಯವರು ಇಲ್ಲದೇ ಇದ್ದಾಗ, ಸ್ವಚ್ಛತೆಗೊಮ್ಮೆ ಸ್ನಾನ, ನಿರ್ಮಾಲ್ಯಕ್ಕೊಮ್ಮೆ ಸ್ನಾನ, ಪೂಜೆಗೊಮ್ಮೆ ಸ್ನಾನವಾಗುತ್ತದೆಯಾದ್ದರಿಂದ ಆ ಸಂದರ್ಭಗಳಲ್ಲಿ ಸ್ನಾನಕ್ಕಿಂತ ಮುಂಚೆ ದೇವರ ಮನೆಯನ್ನು ಸ್ವಚ್ಛ ಮಾಡಬಹುದು.

ಸಾಮಾನ್ಯವಾಗಿ ದೇವರ ಮನೆಯ ಸ್ವಚ್ಛತೆಯನ್ನು ಹೆಣ್ಣುಮಕ್ಕಳು ಮಾಡುತ್ತಾರೆ. ಬೆಳಗಿನ ಜಾವದಲ್ಲಿಯೇ ಎದ್ದು ಸ್ನಾನ ಮಾಡಿ, ದೇವರ ಮನೆಯನ್ನು ಸ್ವಚ್ಛ ಮಾಡಿ, ರಂಗೋಲಿ ಹಾಕಿ, ಪೂಜೆ, ಅಡಿಗೆಗೆ ಸಂಬಂಧಪಟ್ಟ ತಯಾರಿಗಳನ್ನೂ ಮಾಡಿಕೊಂಡು ಆ ನಂತರ ಮಡಿಯುಟ್ಟು ಅಡಿಗೆ ಮಾಡುವದು ಅತ್ಯುತ್ತಮವಾದ ಪದ್ಧತಿ.

ಸ್ನಾನಕ್ಕಿಂತ ಮುಂಚೆ ಸ್ವಚ್ಛ ಮಾಡುವದಿದ್ದರೆ ಹಲ್ಲುಜ್ಜಿರಲೇಬೇಕು. ಹಲ್ಲುಜ್ಜದೇ ದೇವರ ಮನೆಯ ಒಳಗೆ ಪ್ರವೇಶ ಮಾಡುವದು ಒಂದು ಅಪರಾಧ ಎಂದು ವರಾಹದೇವರು ತಿಳಿಸುತ್ತಾರೆ — **"ದಂತಕಾಷ್ಠಾಭಕ್ಷ್ಯುಪಸರ್ಪಣಮ್"** ಎಂದು.

## ಪಾಪರಾಶಿಯ ಪರಿಹಾರ

ದೇವರ ಮನೆಯನ್ನು ಸ್ವಚ್ಛ ಮಾಡುವದರಿಂದ ಉಂಟಾಗುವ ಫಲವನ್ನು ನರಸಿಂಹಪುರಾಣ, ಭವಿಷ್ಯಪುರಾಣ ಮುಂತಾದವುಗಳಲ್ಲಿ ವೇದವ್ಯಾಸದೇವರು ತಿಳಿಸಿದ್ದಾರೆ.

**ಯಾವತ್ಯಃ ಪಾಂಸುಕಣಿಕಾಃ**
**ದ್ರವೀಭೂತಾ ನರೇಶ್ವರ**
**ತಾವಜ್ಜನ್ಮಾರ್ಜಿತೈಃ ಪಾಪೈಃ**
**ಸದ್ಯ ಏವ ವಿಮುಚ್ಯತೇ**

ದೇವರ ಮನೆಯನ್ನು ವರೆಸುವಾಗ ಎಷ್ಟು ಮಣ್ಣಿನಕಣಗಳು ಒದ್ದೆಯಾಗುತ್ತವೆಯೋ, ಅರ್ಥಾತ್ ಎಷ್ಟು ಧೂಳಿನ ಕಣಗಳನ್ನು ತೆಗೆಯುತ್ತೇವೆಯೋ ಅಷ್ಟು ಜನ್ಮಗಳಲ್ಲಿ ಮಾಡಿದ ಪಾಪಗಳಿಂದ ವಿನಿರ್ಮುಕ್ತರಾಗಿಬಿಡುತ್ತೇವೆ.

ದೇವರ ಮನೆಯ ಸ್ವಚ್ಛತೆ ಎಂಬ ಸಣ್ಣ ಕರ್ತವ್ಯದಿಂದಲೂ ಇಷ್ಟು ಪ್ರೀತನಾಗುವ ಆ ಶ್ರೀಹರಿಯ ಕಾರುಣ್ಯ ಅನಂತವಲ್ಲವೇ? ಇದನ್ನೂ

ಮಾಡದಿದ್ದರೆ ನಮ್ಮನ್ನು ಅಘಾಯುಗಳು (ಪಾಪಿಷ್ಠ ಆಯುಷ್ಯದವರು) ಎಂದು ಗೀತೆ ಕರೆಯುವದರಲ್ಲಿ ತಪ್ಪೇನಿದೆ?

## ಒಂದು ಕಲ್ಪದವರೆಗೆ ಮಹರ್ಲೋಕದ ಪ್ರಾಪ್ತಿ

**ಸಂಮಾರ್ಜನಂ ಹರೇರ್ಗೇಹೇ**
**ಕೃತ್ವಾ ಪಾಪೈಃ ಪ್ರಮುಚ್ಯತೇ ।**
**ವಿಷ್ಣುಲೋಕಂ ಸ ಗತ್ವಾಥ**
**ಕಲ್ಪಮೇಕಂ ಸ ತಿಷ್ಠತಿ ।।**

ದೇವರ ಮನೆಯನ್ನು ಪ್ರತೀನಿತ್ಯ ಸ್ವಚ್ಛ ಮಾಡುವದರಿಂದ ಮನುಷ್ಯ ಪಾಪಗಳಿಂದ ವಿನಿರ್ಮುಕ್ತನಾಗುತ್ತಾನೆ.

ಪರಮಾತ್ಮನ ಲೋಕಗಳಲ್ಲಿ ಒಂದಾದ ಮಹರ್ಲೋಕದಲ್ಲಿ ಒಂದು ಕಲ್ಪದ ಕಾಲ ವಾಸವಿದ್ದು ಸುಖವನ್ನು ಅನುಭವಿಸುತ್ತಾನೆ.

ಇಲ್ಲಿ ವಿಷ್ಣುಲೋಕವನ್ನು ಹೊಂದಿ ಒಂದು ಕಲ್ಪದವರೆಗೆ ಇರುತ್ತಾನೆ ಎಂದಷ್ಟೇ ಇದೆ.

ಮಹರ್ಲೋಕ ಎಂದಿಲ್ಲ. ಆದರೂ ಅದು ಅರ್ಥಾತ್ ಸಿದ್ಧವಾಗುತ್ತದೆ.

ಕಾರಣ, ಜೀವ ಮುಕ್ತನಾದ ಬಳಿಕ ಅನಂತ ಕಾಲದವರೆಗೆ ಶಾಶ್ವತವಾಗಿ ವಿಷ್ಣುಲೋಕದಲ್ಲಿಯೇ ಇರುತ್ತಾನೆ. ಮತ್ತೆ ಸಂಸಾರಕ್ಕೆ ಹಿಂತಿರುಗವದಿಲ್ಲ.

ಸ್ವರ್ಗದಲ್ಲಿ ಕೇವಲ ಒಂದು ಮನ್ವಂತರದ ಆಯುಷ್ಯ. ಮಹರ್ಲೋಕದಲ್ಲಿ ಒಂದು ಕಲ್ಪದ ಆಯುಷ್ಯ ಎಂದು ಶ್ರೀಮದಾಚಾರ್ಯರು ತಿಳಿಸುತ್ತಾರೆ — **ಮನ್ವಂತರಾಯುಷಃ ಸ್ವರ್ಗ್ಯಾಃ, ಮಹರ್ಲೋಕೇ ತು ಕಾಲ್ಪಿಕಾಃ** ಎಂದು. ಒಂದು ಕಲ್ಪದವರೆಗೆ ಸುಖವಾಸ ಎಂದು ಇಲ್ಲಿರುವದರಿಂದ ಮಹರ್ಲೋಕದ ಪ್ರಾಪ್ತಿ ಎಂದು ಸಿದ್ಧವಾಗುತ್ತದೆ.

ಅಮುಕ್ತವೈಕುಂಠ ಕರ್ಮಗಳಿಂದ ದೊರೆಯುವದಿಲ್ಲ. ಮತ್ತು ಎಲ್ಲರಿಗೂ ದೊರೆಯುವದಿಲ್ಲ. ಅಲ್ಲಿಗೆ ಹೋದವರು ಸಹ ಪ್ರಳಯಕಾಲದವರೆಗೆ ಅಲ್ಲಿಯೇ ಇದ್ದು ಆ ನಂತರ ಮುಕ್ತಿಯನ್ನು ಪಡೆಯುತ್ತಾರೆ. ಹೀಗಾಗಿ ಇಲ್ಲಿ ವಿಷ್ಣುಲೋಕ ಎಂದರೆ ಮಹರ್ಲೋಕ ಎಂದು ಸಿದ್ಧವಾಗುತ್ತದೆ.

## ಗೋದಾನದ ಫಲ

**ದೇವಮಾಲ್ಯಾಪನಯನಂ**
**ದೇವಾಗಾರಸಮೂಹನಮ್ ।**
**ಸ್ನಪನಂ ಸರ್ವದೇವಾನಾಂ**
**ಗೋಪ್ರದಾನಫಲಂ ಸ್ಮೃತಮ್ ।।**

ಬೆಳಗಿನ ಜಾವದಲ್ಲಿಯೇ ದೇವರ ಮೇಲಿನ ನಿರ್ಮಾಲ್ಯವನ್ನು ತೆಗೆಯುವದರಿಂದ, ದೇವರ ಮನೆಯನ್ನು ಸ್ವಚ್ಛ ಮಾಡುವದರಿಂದ ಮತ್ತು ದೇವರಿಗೆ ದೇವತೆಗಳಿಗೆ ಅಭಿಷೇಕ ಮಾಡುವದರಿಂದ ಗೋವುಗಳನ್ನು ಶ್ರೇಷ್ಠವಾದ ಕ್ರಮದಲ್ಲಿ ದಾನ ಮಾಡಿದ ಫಲ ದೊರೆಯುತ್ತದೆ.

## ಸೆಗಣಿಯಿಂದ ಸಾರಿಸಿದರೆ ಚಾಂದ್ರಾಯಣದ ಫಲ

**ಗೋಮಯೇನ ಮೃದಾ ತೋಯೈಃ**
**ಯಃ ಕರೋತ್ಯನುಲೇಪನಮ್ ।**
**ಚಾಂದ್ರಾಯಣಲಂ ಪ್ರಾಪ್ಯ**
**ವಿಷ್ಣುಲೋಕೇ ಮಹೀಯತೇ ॥**

ಹಸುವಿನ ಸೆಗಣಿ ಅತ್ಯಂತ ಪವಿತ್ರವಾದ ವಸ್ತು. ಮಹಾಲಕ್ಷ್ಮೀದೇವಿಯ ಸನ್ನಿಧಾನಯುಕ್ತವಾದ ಮಂಗಳಪದಾರ್ಥ. ಈ ಸೆಗಣಿಯಿಂದ ಸಾರಿಸಿದ ನೆಲದ ಮೇಲೆ ಕುಳಿತು ಪೂಜೆ ಮಾಡಿದರೆ ಪರಮಾತ್ಮನಿಗೆ ಅತ್ಯಂತ ಪ್ರಿಯ.

ಹೀಗಾಗಿ ದೇವರ ಮನೆಯನ್ನು ಸೆಗಣಿಯಿಂದ ಸಾರಿಸಬೇಕು. ಇದರಿಂದ ಅತ್ಯಂತಕ್ಲಿಷ್ಟವಾದ ಚಾಂದ್ರಾಯಣ ವ್ರತದ[2] ಫಲವನ್ನು ಪಡೆಯುತ್ತೇವೆ. ಹರಿಯಲೋಕವನ್ನು ಪಡೆದು ಆನಂದವನ್ನು ಅನುಭವಿಸುತ್ತೇವೆ.

---

[2] ಪ್ರತಿಪದೆ ಒಂದು ತುತ್ತು, ದ್ವಿತೀಯಾ ಎರಡು, ದಶಮಿ ಹತ್ತು, ಏಕಾದಶೀ ಉಪವಾಸ, ಹುಣ್ಣಿಮೆ 15, ಕೃಷ್ಣಪಕ್ಷದ ಪ್ರತಿಪದೆ 14 ದ್ವಿತೀಯಾ 13. ಹೀಗೆ ಇಷ್ಟು ತುತ್ತುಗಳನ್ನು ಮಾತ್ರ ತಿಂದು ಬದುಕುವದು ಚಾಂದ್ರಾಯಣವ್ರತ.

ಇಂದಿನ ದಿವಸ ಸೆಗಣಿಯ ನೆಲಗಳು ಇಲ್ಲವೇ ಇಲ್ಲ. ಆದರೆ, ದೇವರ ಮನೆಯನ್ನು ವರೆಸಬೇಕಾದರೆ ನೀರಿಗೆ ಸ್ವಲ್ಪ ಸೆಗಣಿ ಹಾಕಿ ವರೆಸುವದರಿಂದ ಶುದ್ಧಿಯೂ ಉಂಟಾಗುತ್ತದೆ, ದೇವರೂ ಪ್ರೀತನಾಗುತ್ತಾನೆ.

## ಸುಣ್ಣ ಬಣ್ಣ ಮಾಡಿದರೆ ಹರಿಲೋಕ

**ಮೃದಾ ಧಾತುವಿಕಾರೈರ್ವಾ**
**ವರ್ಣಕೈರ್ಗೋಮಯೇನ ವಾ ।**
**ಉಪಲೇಪನಕೃದ್ ಯಾತಿ**
**ತತ್ಪುರಂ ಯಾನಮಾಶ್ರಿತಃ ।।**

ಮೃತ್ ಎಂದರೆ ಮಣ್ಣು. ಧಾತುವಿಕಾರ ಎಂದರೆ ಸುಣ್ಣ ಮುಂತಾದವು. ವರ್ಣಕ ಎಂದರೆ ಬಣ್ಣಗಳು. ಗೋಮಯ ಎಂದರೆ ಸೆಗಣಿ.

ದೇವರ ಮನೆಗೆ ಸುಣ್ಣ ಬಣ್ಣ ಮಾಡುವದಿರಿಂದ ವಿಮಾನದಲ್ಲಿ ಕುಳಿತು ಹರಿಲೋಕಕ್ಕೆ ಹೋಗುತ್ತಾನೆ, ಜೀವ.

## ಸಮಸ್ತಸಂಪತ್ತಿನ ಪ್ರಾಪ್ತಿ

**ದೇವ್ಯಾ ಗೃಹಂ ತು ಯಃ ಶಕ್ರ**
**ಸಂಮಾರ್ಜಯತಿ ನಿತ್ಯಶಃ ।**
**ಸ ಭವೇದ್ ಧನವಾನ್ ಸೌಖ್ಯ-**
**ಸರ್ವಸಂಪತ್ಸಮನ್ವಿತಃ ।।**

ದೇವರ ಮನೆಯನ್ನು (ದೇವಿಯ ದೇಗುಲಗಳನ್ನು) ಪ್ರತೀನಿತ್ಯವೂ ಸ್ವಚ್ಛ ಮಾಡುವದರಿಂದ ಧನ, ಸೌಖ್ಯ ಮುಂತಾದ ಸಕಲ ಸಂಪತ್ತುಗಳೂ ದೊರೆಯುತ್ತವೆ.

**ದೇವ್ಯಾ ಗೃಹಂ ತು ಯಃ ಶಕ್ರ**
**ಗೋಮಯೇನೋಪಲೇಪಯೇತ್ ।**
**ಸ್ತ್ರೀ ಪುಮಾನ್ ವಾ ಯಥಾಶಕ್ತಿ**
**ಷಣ್ಮಾಸಾಂಸ್ತು ನಿರಂತರಮ್ ।**
**ಸ ಲಭೇದೀಪ್ಸಿತಾನ್ ಕಾಮಾನ್**
**ದೇವೀಲೋಕೇ ಮಹೀಯತೇ ।।**

ಆರು ತಿಂಗಳ ಕಾಲ ಒಂದೂ ದಿವಸವೂ ಬಿಡದೇ ದೇವರ ಮನೆಯನ್ನು ಸೆಗಣಿಯಿಂದ ಸಾರಿಸಿದಲ್ಲಿ ಮನಸ್ಸಿನ ಎಲ್ಲ ಬಯಕೆಗಳೂ ಪೂರ್ಣವಾಗುತ್ತವೆ. ದೇವೀಲೋಕದ ಪ್ರಾಪ್ತಿಯಾಗುತ್ತದೆ.

## ಸದ್ಗುಣಸಂಪನ್ನ ರಾಜಜನ್ಮ ಪ್ರಾಪ್ತಿ

**ನೈರಂತರ್ಯೇಣ ಯಃ ಕುರ್ಯಾತ್**
**ಪಕ್ಷಂ ಸಂಮಾರ್ಜನಾರ್ಚನಮ್**
**ಯುಗಂ ಕೋಟಿಶತಂ ಸಾಗ್ರಂ**
**ಬ್ರಹ್ಮಲೋಕೇ ಮಹೀಯತೇ**

**ತಸ್ಯಾಂತೇ ಚ ಚತುರ್ವೇದಃ**
**ಸುರೂಪಃ ಪ್ರಿಯದರ್ಶನಃ**
**ಆಢ್ಯಃ ಸರ್ವಗುಣೋಪೇತೋ**
**ರಾಜಾ ಭವತಿ ಧಾರ್ಮಿಕಃ**

ಬ್ರಹ್ಮದೇವರ, ಪ್ರಾಣದೇವರ ಗುಡಿಯನ್ನು, ಹದಿನೈದು ದಿವಸಗಳ ನಿತ್ಯವೂ ಸ್ವಚ್ಛ ಮಾಡಿದರೆ ಬ್ರಹ್ಮಲೋಕದ ವಾಸದ ಪುಣ್ಯ ದೊರೆಯುತ್ತದೆ.

ಆ ನಂತರ, ಚತುರ್ವೇದಗಳನ್ನು ಬಲ್ಲ, ಸ್ಪುರದ್ರೂಪದ, ಜನರ ಮೆಚ್ಚುಗೆಯ, ಸಕಲ ಸಂಪತ್ತುಳ್ಳ, ಸದ್ಗುಣಗಳುಳ್ಳ ಧಾರ್ಮಿಕನಾದ ರಾಜನಾಗಿ ಹುಟ್ಟಿ ಬರುತ್ತಾನೆ.

ಹೀಗೆ, ಪುರಾಣಗಳಲ್ಲಿ ದೇವಿಯ, ಬ್ರಹ್ಮ, ರುದ್ರ, ಸೂರ್ಯ ಮುಂತಾದ ದೇವತೆಗಳ ದೇಗುಲಗಳನ್ನು ಸ್ವಚ್ಛ ಮಾಡುವದರಿಂದ ದೊರೆಯುವ ಪುಣ್ಯದ ಚಿತ್ರಣವಿದೆ.

ನಮ್ಮ ಮನೆಯಲ್ಲಿನ ದೇವರ ಮನೆ ಎಂದರೆ ಎಲ್ಲ ದೇವತೆಗಳ ತಾಣ. ಕಾರಣ, ಭಗವಂತ ಅಲ್ಲಿ ಸನ್ನಿಹಿತನಾಗಿರುತ್ತಾನೆ. **ಸ್ವರ್ಚಿತೇ ಕಂಸಕೇಶಿಘ್ನೇ ಸ್ವರ್ಚಿತಾಃ ಸ್ಯುಃ ಸುರಾಸುರಾಃ** ಎಂದು ಶಾಸ್ತ್ರ ಹೇಳುತ್ತದೆ. ಶ್ರೀಹರಿಯ ಪೂಜೆಯಿಂದ ಸಕಲ ದೇವತೆಗಳ ಪೂಜೆಯ ಫಲವನ್ನು ಪಡೆಯುತ್ತೇವೆ ಎಂದು.

ಹೀಗಾಗಿ ನಮ್ಮ ಮನೆಯಲ್ಲಿನ ದೇವರ ಮನೆಯ ಸ್ವಚ್ಛತೆಯಿಂದ ಪಾಪಗಳ ಪರಿಹಾರ ಮಾಡಿಕೊಂಡು, ಅತಿಶಯಸುಖದ ಲೋಕಗಳನ್ನು ಅನುಭವಿಸಿ, ಮತ್ತೆ ಸಾಧಕ ಜನ್ಮ ಪಡೆಯುತ್ತೇವೆ.

ಹೀಗಾಗಿ ದೇವರ ಮನೆಯ ಸ್ವಚ್ಛತೆಯಲ್ಲಿ ನಮಗೆ ಆದರವಿರಬೇಕು. ಸ್ವಾದಿ, ಪಾಜಕ, ಉಡುಪಿ, ಮಂತ್ರಾಲಯ, ಶ್ರೀರಂಗ ಮುಂತಾದ ಕ್ಷೇತ್ರಗಳಿಗೆ

ಹೋದಾಗ ಗುರುಗಳ ವೃಂದಾವನದ ಸ್ಥಳವನ್ನು, ದೇಗುಲಗಳನ್ನು ಸ್ವಚ್ಛ ಮಾಡಬೇಕು. ಸ್ವಚ್ಛವಾಗಿಡಬೇಕು. ಎಂದಿಗೂ ಅಲ್ಲಿ ಕೊಳೆ ಮಾಡಬಾರದು.

ದೇವರ ಮನೆಯಲ್ಲಿ ದೀಪ ಹಚ್ಚುತ್ತೇವೆ. ಹಚ್ಚಬೇಕಾದರೆ ಕೈಗೆ ಎಣ್ಣೆ ಮೆತ್ತಿಕೊಳ್ಳುತ್ತದೆ. ಅನೇಕರು ಅದನ್ನು ಹಾಗೆಯೇ ಗೋಡೆಗೆ ವರೆಸುತ್ತಾರೆ. ಮಠ, ಮಂದಿರಗಳಲ್ಲಂತೂ ಸರ್ವೇ ಸಾಮಾನ್ಯ. ಆ ರೀತಿ ಎಣ್ಣೆಯನ್ನು ಗೋಡೆಗೆ ಬಳಿಯುವದರಿಂದಲೇ ಒಂದು ವಿಶಿಷ್ಟವಾದ ನರಕವಿದೆ. ಹೀಗಾಗಿ ಸರ್ವಥಾ ಮಾಡಬಾರದು.

ಹೀಗೆ ಅಕ್ಷತೆಯನ್ನು ಗೋಡೆಗೆ ಹಚ್ಚುವದು, ಪದಾರ್ಥಗಳನ್ನು ಎಲ್ಲಂದರಲ್ಲಿ ಬಿಸಾಡುವದು ಮುಂತಾದವನ್ನು ಮಠಗಳಲ್ಲಿ ದೇಗುಲಗಳಲ್ಲಿ ಸರ್ವಥಾ ಮಾಡಬಾರದು. ಮಹತ್ತರ ಪಾಪಗಳನ್ನು ನೀಡುವ ಕುಕರ್ಮವದು. ಮಕ್ಕಳಿಗೆ ಆ ರೀತಿಯ ಶಿಕ್ಷಣವನ್ನು ಚಿಕ್ಕಂದಿನಿಂದಲೇ ನೀಡಬೇಕು.

## ಇರುವೆ ಮುಂತಾದವಕ್ಕೆ ತೊಂದರೆಯಾಗಬಾರದು

ಮೊದಲಿಗೆ ದೇವರ ಮನೆಯಲ್ಲಿ ಕೀಟಗಳು ಬಾರದಂತೆ ಸ್ವಚ್ಛವಾಗಿಟ್ಟುಕೊಳ್ಳಬೇಕು.

ಇನ್ನು ಇರುವೆ ಮುಂತಾದವುಗಳು ಬಂದಾಗ ಅಲ್ಲಿ ಅವಕ್ಕೆ ತೊಂದೆರಯಾಗದಂತೆ ಅವನ್ನು ಹೊರಕ್ಕೆ ಹಾಕಬೇಕು ಎಂದು ಶಾಸ್ತ್ರ ತಿಳಿಸುತ್ತದೆ.

ಕಸ ಗುಡಿಸಬೇಕಾದರೆ ಮೆಲ್ಲಗೆ ಕಸ ಗುಡಿಸಿದರೆ ಅವು ಸಾಯುವದಿಲ್ಲ. ಅವುಗಳಿಗೆ ನೋವಾಗದಂತೆ ಅವನ್ನು ಪರಿಹರಿಸಿಕೊಂಡರೆ (ದೂರಕ್ಕೆ ಕಳುಹಿಸಿದರೆ) ಚಾಂದ್ರಾಯಣದ ಫಲ ದೊರೆಯುತ್ತದೆ ಎಂದ ಭವಿಷ್ಯಪುರಾಣದಲ್ಲಿ ಶ್ರೀ ವೇದವ್ಯಾಸದೇವರು ತಿಳಿಸುತ್ತಾರೆ —

**ಪಶ್ಯನ್ ಪರಿಹರನ್ ಜಂತೂನ್**
**ಮಾರ್ಜನ್ಯಾ ಮೃದುಸೂಕ್ಷ್ಮಯಾ ।**
**ಶನೈಃ ಸಂಮಾರ್ಜನಂ ಕೃತ್ವಾ**
**ಚಾಂದ್ರಾಯಣಫಲಂ ಲಭೇತ್ ।।**

## ಸ್ವಚ್ಛತೆಯ ಪದಾರ್ಥಗಳು

ದೇವರ ಪೂಜೆಯಲ್ಲಿ ಕಂಡಕಂಡ ವಸ್ತುಗಳನ್ನು ಬಳಸುವಂತಿಲ್ಲ. ಶುದ್ಧವಾದ ವಸ್ತುಗಳನ್ನೇ ಬಳಸಬೇಕು.

ದೇವರಿಗಾಗಿ ಇಟ್ಟಿರುವ ಯಾವ ಪದಾರ್ಥಗಳನ್ನೂ ನಮಗಾಗಿ ಅಥವಾ ಬೇರೆಯ ಕೆಲಸಕ್ಕಾಗಿ ಉಪಯೋಗಿಸಬಾರದು.

ದೇವರ ವಸ್ತ್ರ, ದೇವರ ಪೂಜೆಯ ಪಾತ್ರೆಗಳು, ನೀರು ತರಲು ಬಳಸುವ ಕೊಡಗಳು, ದೇವರಿಗೆ ಸಮರ್ಪಿಸುವ ಛತ್ರ ಛಾಮರ ಕನ್ನಡಿ ಮುಂತಾದವು ಯಾವುದನ್ನೂ ನಾವು ಬಳಸತಕ್ಕದ್ದಲ್ಲ.

ಮತ್ತು ನಾವು ಬಳಸಿದ್ದನ್ನು ದೇವರಿಗೆ ಸಮರ್ಪಿಸಬಾರದು.

## ಹುಲ್ಲಿನ ಪೊರಕೆ

**ಮಾರ್ಜನ್ಯಾ ಮೃದುಸೂಕ್ಷ್ಮಯಾ** ಎಂದು ಭವಿಷ್ಯಪುರಾಣ ಹೇಳುತ್ತದೆ.

ಮಾರ್ಜನೀ ಎಂದರೆ ಪೊರಕೆ. ಅದು ಮೃದುವಾಗಿರಬೇಕು, ಮತ್ತು ತೆಳ್ಳಗಿರಬೇಕು. ಗಟ್ಟಿಯಾಗಿದ್ದರೆ, ಇರುವೆ ಮುಂತಾದವಕ್ಕೆ ಅದು ತಗುಲಿದಾಗ ಅವಕ್ಕೆ ನೋವಾಗುತ್ತದೆ. ತುಂಬ ದಪ್ಪಗಿದ್ದರೂ ಅದರಿಂದ ಕೀಟಗಳಿಗೆ ತೊಂದರೆಯಾಗುತ್ತದೆ. ಹೀಗಾಗಿ ಮೆತ್ತಗಿನ ಪೊರಕೆಯಿರಬೇಕು.

ಪೊರಕೆ ಅನೇಕವಿಧ, ತೆಂಗಿನ ಕಡ್ಡಿಯ ಪೊರಕೆ, ಹಂಚಿಕಡ್ಡಿಯ ಪೊರಕೆ, ಇವತ್ತಿನ ಪ್ಲಾಸ್ಟಿಕ್ಕಿನ ಪೊರಕೆ ಮುಂತಾದವು. ಇದರ ಜೊತೆಯಲ್ಲಿ ಹುಲ್ಲಿನ ಪೊರಕೆಯೂ ದೂರೆಯುತ್ತದೆ. ಹಳ್ಳಿಗಳ ಕಡೆಯಲ್ಲಿ ಹೇರಳವಾಗಿ ದೊರೆಯುತ್ತದೆ.

ಮನೆಕಟ್ಟುವ ಮೇಸ್ತ್ರಿಗಳು ಸುಣ್ಣ ಹಚ್ಚಲು ಉಪಯೋಗಿಸುವಂತಹುದ್ದು[3].

ದರ್ಭೆಯ ಜಾತಿಯ ಅಗಲದ ಹುಲ್ಲಿನಿಂದ ಮಾಡಿರುತ್ತಾರೆ. ಶಾಸ್ತ್ರ ತಿಳಿಸುವಂತೆ ಅದು ಮೆತ್ತಗೆ ತೆಳ್ಳಗೆ ಇರುತ್ತದೆ. ಅದನ್ನು ದೇವರ ಮನೆಯ ಸ್ವಚ್ಛತೆಗಾಗಿ ಬಳಸಬೇಕು.



ಆ ಪೊರಕೆಯನ್ನು  ಬೇರೆ ಕೊಠಡಿಗಳ ಸ್ವಚ್ಛತೆಗಾಗಿ ಸರ್ವಥಾ ಉಪಯೋಗಿಸಬಾರದು.

---

[3] ಕೆಲವು hardware ಅಂಗಡಿಗಳಲ್ಲಿ ದೊರೆಯುತ್ತದೆ. ಅಥವಾ ಸಂತೆ ನಡೆಯುವ ಹಳ್ಳಿಗಳ ಕಡೆ ಹೋದಾಗ ನಾಲ್ಕೈದು ತಂದಿಟ್ಟುಕೊಂಡಿರಬೇಕು.

## ಶುದ್ಧವಾದ ನೀರು

**ವಸ್ತ್ರಪೂತೇನ ತೋಯೇನ**
**ಯಃ ಕುರ್ಯಾದುಪಲೇಪನಮ್ ।**
**ಪಶ್ಯನ್ ಪರಿಹರನ್ ಜಂತೂನ್**
**ಚಾಂದ್ರಾಯಣಫಲಂ ಲಭೇತ್ ।।**

ದೇವರ ಮನೆಯನ್ನು ವರೆಸಲು ಬಳಸುವ ನೀರು ಶುದ್ಧವಾಗಿರಬೇಕು.  ನಾವು ನೀರನ್ನು ಕುಡಿಯಬೇಕಾದರೂ ವಸ್ತ್ರದಿಂದ ಶೋಧಿಸಿಯೇ ಕುಡಿಯಬೇಕು ಎನ್ನುತ್ತಾರೆ ಪ್ರಾಚೀನರು – **ವಸ್ತ್ರಪೂತಂ ಪಿಬೇತ್ ತೋಯಮ್** ಎಂದು. ಕಾರಣ, ನೀರಿನಲ್ಲಿ ಇರಬಹುದಾದ ಸಣ್ಣ ಪುಟ್ಟ ಕೀಟಗಳು ವಸ್ತ್ರದಿಂದ ಶೋಧಿಸಿದಾಗ ಪರಿಹಾರವಾಗುತ್ತವೆ.  ದೇವರ ಪೂಜೆಗೆ ಬಳಸುವ ನೀರಂತೂ ಶುದ್ಧವಸ್ತ್ರದಿಂದ ಶೋಧಿಸಲ್ಪಡಲೇ ಬೇಕು. ಆ ರೀತಿ ಶೋಧಿಸಿದ ಜಲದಿಂದ ದೇವರ ಮನೆಯನ್ನು ವರೆಸಿದರೆ ಚಾಂದ್ರಾಯಣದ ಫಲ ದೊರೆಯುತ್ತದೆ ಎಂದು ಮೇಲಿನ ಭವಿಷ್ಯಪುರಾಣದ ವಚನ ತಿಳಿಸುತ್ತದೆ.

## ಪ್ಲಾಸ್ಟಿಕ್ಕು, ಕೆಮಿಕಲ್ಲುಗಳ ಉಪಯೋಗ ಬೇಡ

ಕಲಿಯುಗದಲ್ಲಿನ ಅತೀದುಷ್ಟ ವಸ್ತುಗಳಲ್ಲೊಂದು ಪ್ಲಾಸ್ಟಿಕ್ಕು. ಇವತ್ತಿನ ಜೀವನದಲ್ಲಿ ಹಾಸುಹೊಕ್ಕಾಗಿಬಿಟ್ಟಿದೆ. ಅನೇಕ ಕಡೆಯಲ್ಲಿ ಮಡಿಯಲ್ಲಿಯೂ ಅದನ್ನು ಮುಟ್ಟುತ್ತಾರೆ.

ಆದರೆ, ಅದು ಶುದ್ಧಪದಾರ್ಥವಲ್ಲ. ಹೀಗಾಗಿ ದೇವರ ಮನೆಯಲ್ಲಿ ಪ್ಲಾಸ್ಟಿಕ್ಕಿನ ಸಂಪರ್ಕವಿಲ್ಲದಂತೆ ನೋಡಿಕೊಳ್ಳಬೇಕು. ಮಡಿಯಲ್ಲಿದ್ದಾಗಲಂತೂ ಸರ್ವಥಾ ಪ್ಲಾಸ್ಟಿಕನ್ನು ಮುಟ್ಟಬಾರದು.

ಹೀಗಾಗಿ, ಪ್ಲಾಸ್ಟಿಕ್ಕಿನ ಪೊರಕೆ, ಪದಾರ್ಥಗಳು ಮುಂತಾದವು ದೇವರ ಮನೆಯಲ್ಲಿ ಪ್ರವೇಶವನ್ನೇ ಪಡೆಯಬಾರದು.

## ರಂಗೋಲಿಯ ಫಲ

ಹೀಗೆ ದೇವರ ಮನೆಯ ಸ್ವಚ್ಛತೆಯನ್ನು ಮಾಡಿ ದೇವರಮನೆಯ ಹೊಸ್ತಿಲಿನ ಮುಂದೆ, ವೇದಿಕೆಯ ಮುಂದೆ ರಂಗೋಲಿಗಳನ್ನು ಹಾಕಬೇಕು.

ವೇದಿಕೆಯ ಮೇಲೆ ರಂಗೋಲಿ ಹಾಕಬೇಕಾದರೆ ಸ್ನಾನವಾಗಿರಲೇಬೇಕು. ಮಂಟಪವನ್ನು ಶೃಂಗರಿಸಬೇಕಾದರೆ ಸ್ನಾನವಾದರೆ ಸಾಲದು, ದೇವರ ಪೂಜೆಯ ಮಡಿಯಲ್ಲಿಯೇ ಇರಬೇಕು.

**ಶಿಲಾಚೂರ್ಣೇನ ಯೋ ಮರ್ತ್ಯಃ**
**ದೇವತಾಯತನೇ ನೃಪ**
**ಕರೋತಿ ಸ್ವಸ್ತಿಕಾದೀನಿ**
**ತಸ್ಯ ಪುಣ್ಯಂ ನಿಶಾಮಯ**

**ಯಾವತ್ಯಃ ಕಣಿಕಾ ಭೂಮೌ**
**ಲಿಪ್ತಾ ರವಿಕುಲೋದ್ಭವ**
**ತಾವದ್ಯುಗಸಹಸ್ರಾಣಿ**
**ಹರಿಸಾಲೋಕ್ಯಮಶ್ನುತೇ**

ಶಿಲಾಚೂರ್ಣ ಎಂದರೆ ಕಲ್ಲಿನ ಪುಡಿ. ರಂಗೋಲಿಗೆ ಬಳಸುವ ಪದಾರ್ಥ.

ಈ ರಂಗೋಲಿಪುಡಿಯಿಂದ ವಿಧವಿಧವಾದ ರಂಗೋಲಿಗಳನ್ನು ಯಾರು ಹಾಕಿದವರ ಪುಣ್ಯ ಮಹತ್ತರವಾದದ್ದು.

ರಂಗೋಲಿಯಲ್ಲಿ ಎಷ್ಟು ಕಣಗಳಿರುತ್ತವೆಯೋ ಒಂದೊದು ಕಣಕ್ಕೆ ಒಂದು ಸಾವಿರ ಯುಗದಂತೆ ಅಷ್ಟು ಸಾವಿರಯುಗಗಳು ಹರಿಲೋಕದಲ್ಲಿ ವಾಸದ ಸೌಭಾಗ್ಯ.

ಅಂದರೆ ಇಡಿಯ ಜೀವನದಲ್ಲಿ ಪ್ರತೀನಿತ್ಯ ರಂಗೋಲಿ ಹಾಕಿದರೆ ಅನಂತ ರಂಗೋಲಿಯ ಕಣಗಳು, ಅನಂತಯುಗಗಳ ವರೆಗೆ ಹರಿಲೋಕದಲ್ಲಿ ವಾಸ, ಅರ್ಥಾತ್ ಮೋಕ್ಷವನ್ನೇ ಸ್ವಾಮಿ ಕರುಣಿಸುತ್ತಾನೆ.

ರಂಗೋಲಿ ಹಾಕುವದರಿಂದ ಸಾಕ್ಷಾತ್ ಮೋಕ್ಷ ಎಂದರ್ಥವಲ್ಲ. ಅದರಿಂದ ಗುರುಗಳ ಸಂಪರ್ಕ, ಅವರಿಂದ ಉಪದೇಶ, ಉಪಾಸನೆ,

ಬಿಂಬಮೂರ್ತಿಯ ಸಾಕ್ಷಾತ್ಕಾರದ ಮುಖಾಂತರ ಹರಿಲೋಕಪ್ರಾಪ್ತಿ ಎಂದರ್ಥ.

ನಮ್ಮ ಮೋಕ್ಷದ ಸಾಧನೆಗೆ ಪ್ರತಿಬಂಧಕವಾದ ಏನೆಲ್ಲ ಪಾಪಗಳಿವೆ, ಆ ಪಾಪಗಳೆಲ್ಲ ಈ ರೀತಿಯ ಸೇವೆಯಿಂದ ಪರಿಹಾರವಾಗುತ್ತವೆ ಎಂದರ್ಥ.

## ದೀಪವನ್ನು ಬೆಳಗಿಸಬೇಕು

ಹೀಗೆ ದೇವರ ಮನೆಯನ್ನು ಸ್ವಚ್ಛ ಮಾಡಿ, ರಂಗೋಲಿ ಹಾಕಿ ನಂದಾದೀಪಗಳನ್ನು ಬೆಳಗಿಸಬೇಕು.

ಹಿಂದಿನ ದಿವಸದಿಂದಲೇ ನಂದಾದೀಪ ಉರಿಯುತ್ತಿರುತ್ತದೆ. ಅದರಿಂದ ಒಂದು ತುಳಸೀಕಾಷ್ಠವನ್ನು ಬೆಳಗಿಸಿಕೊಂಡು ಮತ್ತೊಂದು ನಂದಾದೀಪವನ್ನು, ಅಥವಾ ಎರಡು ನಂದಾದೀಪಗಳನ್ನು  ಹಚ್ಚಿ ದೇವರ ಮುಂದಿಡಬೇಕು. ಆಗ ಹಿಂದಿನ ದೀಪದ ಬೆಳಕೇ ಮುಂದುವರೆದಂತಾಗುತ್ತದೆ. ನಂದದ ದೀಪ, ಅಖಂಡದೀಪವಾಗುತ್ತದೆ.

ಇದು ದೇವರ ಪೂಜೆಯ ದೀಪವಲ್ಲ. ದೇವರ ಪೂಜೆಯನ್ನು ಆರಂಭಿಸಬೇಕಾದರೆ ದೀಪವನ್ನು ಬೆಳಗಿಸಬೇಕು, ಅದು ಬೇರೆಯ ದೀಪ. ಇದು ದೇವರ ಮನೆಯಲ್ಲಿ ಸರ್ವದಾ ಉರಿಯುವ ನಂದಾದೀಪ[4].

**ಅಖಂಡದೀಪಂ ಯಃ ಕುರ್ಯಾದ್**
**ವಿಷ್ಣೋರ್ವಾ ಶಂಕರಸ್ಯ ಚ ।**
**ದಿನೇದಿನೇಽಶ್ವಮೇಧಸ್ಯ**
**ಫಲಮಾಪ್ನೋತ್ಯನುತ್ತಮಮ್ ॥**

ದೇವರಮನೆಯಲ್ಲಿ ಅಖಂಡದೀಪವನ್ನು ಅರ್ಥಾತ್ ನಂದದ ನಂದಾದೀಪವನ್ನು ಪ್ರತಿನಿತ್ಯ ಬೆಳಗಿಸುವದರಿಂದ ಅಶ್ವಮೇಧ ಯಜ್ಞ ಮಾಡಿದರೆ ದೊರೆಯುವ ಫಲ ದೊರೆಯುತ್ತದೆ.

---

[4] ದೀಪವನ್ನು ಬೆಳಗಿಸಬೇಕಾದರೆ ತಿಳಿಯಬೇಕಾದ ಸಾಕಷ್ಟು ವಿಷಯಗಳಿವೆ. ದೀಪಪ್ರಜ್ವಾಲನೆಯ ಸಂದರ್ಭದಲ್ಲಿ ತಿಳಿಸುತ್ತೇನೆ.

## ಸ್ವಚ್ಛ ಮಾಡಬೇಕಾದರೆ ಅನುಸಂಧಾನ

ದೇವರ ಸೇವೆಯನ್ನು ಮಾಡುವ ಮುಖ್ಯ ಅಧಿಕಾರ ಇರುವದು ಮಹಾಲಕ್ಷ್ಮೀದೇವಿಯರಿಗೆ. ಕೋಟಿಕೋಟಿ ಭೃತ್ಯರಿದ್ದರೂ ಹಾಟಕಾಂಬರನ ಸೇವೆಯನ್ನು ಮಾಡುವ ಕಾರ್ಯವನ್ನು ಆ ತಾಯಿ ತಾನೇ ಮಾಡುತ್ತಾಳೆ ಎಂದು ಶಾಸ್ತ್ರ ತಿಳಿಸುತ್ತದೆ — **"ಸ್ವಯಮಿಂದಿರೈವ ಪತಿಮಾನಕರೀ ಗೃಹಕರ್ಮ ಯತ್ರ ಕುರುತೇ ಸುತರಾಮ್"** ಎಂದು.

ನಮ್ಮ ಸ್ವಾಮಿ ಮಂಟಪದಲ್ಲಿ ಆಸೀನನಾಗಿದ್ದಾನೆ, ನನ್ನೊಳಗೆ ಮಹಾಲಕ್ಷ್ಮೀದೇವಿಯರು, ದೇವತೆಗಳು ವಿಶೇಷವಾಗಿ ಸನ್ನಿಹಿತರಾಗಿ ದೇವರ ಮನೆಯನ್ನು ಸ್ವಚ್ಛ ಮಾಡಿಸುತ್ತಿದ್ದಾರೆ. ಅಂತರ್ಯಾಮಿ ನನ್ನಿಂದ ಈ ಮಹಾ ಸತ್ಕರ್ಮ ಮಾಡಿಸುತ್ತಿದ್ದಾನೆ ಎಂದು ಚಿಂತಿಸಿ ಸ್ವಚ್ಛತೆಯನ್ನು ಆರಂಭಿಸಬೇಕು.

ನಮ್ಮ ದೇಹವೇ ದೇವರ ಮನೆ. ಅಂತರ್ಯಾಮಿಯೇ ದೇವರು. ಭಗವಂತ ನನ್ನ ಮನಸ್ಸು, ಇಂದ್ರಿಯ, ದೇಹಗಳಲ್ಲಿರುವ

ದೋಷವನ್ನು ಸ್ವಚ್ಛ ಮಾಡಿಕೊಳ್ಳಲು ನನಗೆ ಬರುವದಿಲ್ಲ. ನೀನೇ ಸ್ವಚ್ಛಮಾಡು, ನನ್ನನ್ನು ಪರಿಶುದ್ಧಗೊಳಿಸು ಎಂದು ಪ್ರಾರ್ಥನೆ ಮಾಡುತ್ತ ಸ್ವಚ್ಛತೆಯನ್ನು ಮಾಡಬೇಕು.

ಸ್ವಚ್ಛತೆ ಮಾಡುವ ಸಂದರ್ಭದಲ್ಲಿ ದೇವರನಾಮಗಳನ್ನು ದೇವರಸ್ತೋತ್ರಗಳನ್ನು ಮೆಲ್ಲಗಿನ ಧ್ವನಿಯಲ್ಲಿ ಪಠಿಸುತ್ತಿರಬೇಕು.

ಸ್ವಚ್ಛತೆ ಮುಗಿದ ನಂತರ ಭಕ್ತಿಯಿಂದ ನಮಸ್ಕಾರಗಳನ್ನು ಮಾಡಿ, ಶ್ರೀಹರೇ, ನೀನೇ ನನ್ನಲ್ಲಿ ನಿಂತು, ದೇವತೆಗಳ ಮುಖಾಂತರ ಮಾಡಿಸಿದ ಸತ್ಕರ್ಮವಿದು. ಇದನ್ನು ಮಾಡುವಾಗ ತಪ್ಪು ಮಾಡಿದ್ದಲ್ಲಿ ಕ್ಷಮಿಸು ಎಂದು ಪ್ರಾರ್ಥಿಸಬೇಕು.

ಇದರಿಂದ ಪ್ರೀತನಾಗು. ನನ್ನಲ್ಲಿ ಅಜ್ಞಾನದ ಕೊಳೆಯನ್ನು ಕಳೆದು ಜ್ಞಾನವನ್ನು ನೀಡು. ಪಾಪದ ಕೊಳೆಯನ್ನು ತೊಳೆದು ಶುದ್ಧನನ್ನಾಗಿ ಮಾಡು. ನನ್ನ ದೇಹ ನಿನ್ನ ಆವಾಸಕ್ಕೆ ಯೋಗ್ಯವಾಗಿ ಸದಾ ಶುದ್ಧವಾಗಿರುವಂತೆ ಅನುಗ್ರಹಿಸು ಎಂದು ಪ್ರಾರ್ಥಿಸಬೇಕು.

ಹೀಗೆ ದೇವರಪೂಜೆಗೆ ಸಂಬಂಧಪಟ್ಟ ಮೊದಲ ಹಂತದಲ್ಲಿಯೇ — ದೇವರ ಮನೆಯ ಸ್ವಚ್ಛತೆಯಲ್ಲಿಯೇ — ಇಷ್ಟು ಪುಣ್ಯದ ರಾಶಿಯನ್ನು ಭಗವಂತ ಕರುಣಿಸುತ್ತಾನೆ. ಇನ್ನು ನಿರ್ಮಾಲ್ಯವಿಸ-ರ್ಜನೆ, ಅಭಿಷೇಕ, ಅರ್ಚನೆಗಳಿಂದ ದೊರೆಯುವ ಪುಣ್ಯದ ಲೆಕ್ಕ ಗಣನೆಗೆ ಸಿಗುವದಿಲ್ಲ.  ದೇವರ ಪೂಜೆಯಿಂದ ದೊರೆಯುವ ಫಲ ಅನಂತ ಎಂದು ಶ್ರೀಮದಾಚಾರ್ಯರೇ ಹೇಳಿದ ಬಳಿಕ ಆ ಫಲ-ಗಳನ್ನು ಅಳೆಯುವ ಶಕ್ತಿ ಯಾವ ಜೀವಕ್ಕುಂಟು?

ದೇವರ ಮನೆಯನ್ನು, ದೇಗುಲಗಳಲನ್ನು ಗುಡಿಸುವದರಿಂದ, ವರೆಸುದವರಿಂದ, ಸ್ವಚ್ಛವಾಗಿಡುವದರಿಂದ, ಅಲಂಕರಿಸುವದರಿಂದ ಪಾಪಗಳನ್ನು ಪರಿಹರಿಸುವ, ಚಾಂದ್ರಾಯಣ, ಅಶ್ವಮೇಧಾಧಿಗಳ ಫಲಗಳನ್ನು ಅನುಗ್ರಹಿಸುವ, ಆ ನಮ್ಮ ಸ್ವಾಮಿಗೆ ಜೀವಸರ್ವಸ್ವವನ್ನೂ ಸಮರ್ಪಿಸಿಕೊಂಡು ಬೇಡಿಕೊಳ್ಳೋಣ — ಸ್ವಾಮಿ, ನಿನ್ನ ಮತ್ತು ನಿನ್ನವರ ಸೇವೆಯ ಪೂಜೆಯ ಸೌಭಾಗ್ಯವನ್ನು ಸದಾ ಕರುಣಿಸು ಎಂದು.

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to **9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, "Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India

nagendracharya@yahoo.co.in

WhatsApp: 9901 551 491